'ಬರ್ತ್‌ಡೇ, ಹ್ಯಾಪಿ ಜರ್ನಿ' ಎನ್ನುತ್ತಾ ಬಾಗಿಲತ್ತ ದಡಬಡಾಯಿಸಿದ್ದರು.

ಮತ್ತೆ ಅಂತರ್ಮುಖಿಯಾಗಿ ಶುದ್ಧ ಭಾಷಾ ಬಳಕೆಯ ಬಗ್ಗೆ ಯೋಚಿಸುತ್ತ ಕೂತೆ. ಅಜೀವ-ಆಜೀವ, ಅಬಾಲವೃದ್ಧರು- ಆಬಾಲವೃದ್ಧರು ಪದಗಳು. ಅದೇ ರೀತಿ 'ಆಮೂಲಾಗ್ರ' ಎಂದರೆ ಬೇರಿನಿಂದ ತುದಿಯವರೆಗೂ ಅಂದರೆ 'ಇಡಿಯಾದ, ಸಮಗ್ರ, ಸಂಪೂರ್ಣ' ಎನ್ನುವುದನ್ನು ಸೂಚಿಸಲು ವಿಶೇಷವಾಗಿ ಬಳಸಲಾಗುತ್ತದೆ. ಮೈಮರೆತು 'ಅಮೂಲಾಗ್ರ' ಎಂದು ನಮೂದಿಸಿಬಿಟ್ಟರೆ ತಪ್ಪಾಗಿ ಹೋಗುತ್ತದಲ್ಲವೆ. 'ಆಜಾನುಬಾಹು' ಕೂಡ ಅದೇ ತೆರನಾದದ್ದು. ಅದಕ್ಕಾಗಿಯೇ, ಅ ಮತ್ತು ಆ ಅಕ್ಷರಗಳನ್ನು ತುಸು ಕಣ್ಣು ಬಿಟ್ಟು ನೋಡಬೇಕೆನ್ನುವುದು ನನ್ನ ಅಹವಾಲು.

ವ್ಯಾಕರಣಬದ್ಧವಾಗಿ ನೋಡಿದರೆ ಚಹದಂಗಡಿಗಳಿಗೆ ಉಪ + ಆಹಾರ = ಉಪಾಹಾರ ಗೃಹ ಎಂದು ಫಲಕ ಬರೆಸಿ ನೇತಾಡಿಸಬೇಕು. ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೆ 'ಉಪಹಾರ' ಎಂದು ಬರೆಸಿ ಕೈ ತೊಳೆದುಕೊಂಡವರೇ ಬಹಳ. ಮಸಾಲೆ ವಾಸನೆ ಅಷ್ಟು ದೂರಕ್ಕೇ ಮೂಗಿಗೆ ಬಡಿಯುವಾಗ ಅದರ ತಿದ್ದುಪಾಟಾದರೂ ಯಾಕೆ ಎಂದು ಭಾವಿಸಿ ಕೊಂಡಿರಬೇಕು ಮಾಲೀಕರು. ಮನಸ್ಸಿನೊಳಗೇ ನಕ್ಕೆ.

ಸುಮಾರು ಐವತ್ತು ವರ್ಷಗಳಷ್ಟು ಹಿಂದೆ, ಕೇಂದ್ರ ಸರ್ಕಾರ ಪ್ರಾದೇಶಿಕ ಭಾಷಾ ಪ್ರಯೋಗಕ್ಕಾಗಿ ಅಧಿಕೃತ ಸಮಿತಿಯೊಂದನ್ನು ರಚಿಸಿತ್ತು. ಸದರಿ ಸಮಿತಿಯ ಸದಸ್ಯರು ಸೀದಾ ಸಂಸ್ಕೃತ ಶಬ್ದಕೋಶವೊಂದನ್ನು ಮುಂದಿಟ್ಟುಕೊಂಡು ಮಾಡಿದ ಅವಘಡವದು. ಇಂಗ್ಲಿಷಿನ ಪೊಲೀಸ್ ಪದಕ್ಕೆ ಆಗಲೇ ಜನರ ನಾಲಿಗೆಯ ಮೇಲೆ ನಲಿದಾಡುತ್ತಿದ್ದ ಪೊಲೀಸು ಎಂದಿದ್ದರಾಗುತ್ತಿತ್ತು. ಹಾಗೆ ಮಾಡದೆ ಅದಕ್ಕೆ 'ಆರಕ್ಷಕ' ಎಂದೂ; ಎಂಜಿನಿಯರ್ ಅನ್ನುವುದಕ್ಕೆ 'ಅಭಿಯಂತರ' ಎಂದೂ ಠಂಕಿಸಿದ್ದು, ಹಾಗೂ ಹೀಗೂ ಅವೇ ಚಾಲ್ತಿಯಲ್ಲಿ ಬಂದದ್ದು ಹಳೆಯ ಕಥೆ. ಅವರ ಕೈಯಲ್ಲಿ ರೈಲು ಕೂಡ 'ಧೂಮಶಕಟ' ವಾಗಿತ್ತು! ಹೊಗೆ ಬಂಡಿ ಇಲ್ಲದ ಪ್ರಯುಕ್ತ ಈಗ ಅದು ಔಟ್ ಡೇಟೆಡ್. ಕುತ್ತಿಗೆಯಿಂದ ಇಳಿಬಿಡುವ 'ಟೈ' ಅನ್ನು ನಮ್ಮ ಹಾಸ್ಯ ಲೇಖಕರು 'ಕಂಠ ಲಂಗೋಟಿ' ಆಗಿಸಿದ್ದು ಅದು ಬೇರೆ ಮಾತು.

'ಜೀವಮಾನದ ಕನಸು' ಎಂದುಕೊಂಡ ಬಹುತೇಕರು ಎಷ್ಟೆಲ್ಲಾ ಪಡಿಪಾಟಲು ಪಟ್ಟು; ಸಾಲಸೋಲ ಮಾಡಿ; ಅಳೆದೂ ಸುರಿದೂ ಮನೆ ಕಟ್ಟಿಸಿ ಆಹ್ವಾನ ಪತ್ರಿಕೆಯಲ್ಲಿ ಗೃಹ ಪ್ರವೇಶ ಅನ್ನುವುದನ್ನು ತಪ್ಪಾಗಿ 'ಗ್ರಹ ಪ್ರವೇಶ' ಎಂದು ಅಚ್ಚಿಸಿಬಿಟ್ಟವರಿದ್ದಾರೆ. ಅದೆಂಥಾ ಗ್ರಹಚಾರ! ಸರಿಯಾಗಿ ಕಣ್ಣುಬಿಟ್ಟು ಓದದ ಕರಡು ಪ್ರಮಾದ. 'ಬೆರಕಿ' ಎಂದರೆ ಉತ್ತರ ಕರ್ನಾಟಕದವರ ಬಾಯಲ್ಲಿ ಚುರುಕು ಮತಿ ಎಂತಾದರೆ, ಅದೇ ಹಳೇ ಮೈಸೂರು ಸೀಮೆಯಲ್ಲಿ 'ಬೆರಕೆ' (Cross breed); ಹಾಗೆಯೇ ಬೆಳಗಿನ ನಾಷ್ಟಾ 'ತಿಂಡಿ' ಉತ್ತರ ಕರ್ನಾಟಕದವರ ಬಾಯಲ್ಲಿ 'ತೀಟೆ' ಎಂಬ ವಿಶೇಷ ಗುಪ್ತ ಅರ್ಥ ಹೊಮ್ಮಿಸುತ್ತದೆ ಗೊತ್ತೆ. ಕ್ಯಾ ಬಾತ್ ಹೈ!

ಬಹುತೇಕರಿಗೆ ಪದೇ ಪದೇ ಕೈಕೊಡುವ ಈ ಮಹಾಪ್ರಾಣ ಅಕ್ಷರಗಳಿಗೆ ಹಳೆ ಮೈಸೂರು ಸೀಮೆಯಲ್ಲಿ 'ಹೊಕ್ಕುಳ ಸೀಳುವುದು' ಎಂದರೆ; ಉತ್ತರ ಕರ್ನಾಟಕದವರು 'ಕುಂಡೀ ಸೀಳುವದು' ಅನ್ನುತ್ತಾರೆ, ಖುಲಂ ಖುಲ್ಲಾ. ಉದಾಹರಣೆಗೆ, 'ಮಧ್ಯ' ಪದದಲ್ಲಿರುವ 'ದ' ಕೆಳಗೆ ಗೀಟುನಾಮ ಹಾಕದಿದ್ದಲ್ಲಿ ಅದು 'ಮದ್ಯ' ಅಂದರೆ 'ಹೆಂಡ-ಸಾರಾಯಿ' ಆಗಿಬಿಡುವ ಅಪಾಯವಿದೆ ಬಲ್ಲಿರಾ!

**ಊರಿಂಗೆ ದಾರಿಯನು ಆರು ತೋರಿದಡೇನು**
**ಸಾರಾಯದ ನಿಜವ ತೋರುವ ಗುರುವು ತಾ**
**ನಾರಾದಡೇನು ಸರ್ವಜ್ಞ**

ಇಲ್ಲಿನ 'ಸಾರಾಯ' ಅನ್ನುವುದನ್ನು 'ಸಾರಾಯಿ' ಎಂದು ಮೇಲ್ನೋಟಕ್ಕೆ ಅಪಾರ್ಥ ಮಾಡಿಕೊಂಡರೆ ಕಷ್ಟ. ಅದು ಇಲ್ಲಿ 'ತತ್ವಜ್ಞಾನ', ವಿಶೇಷ ಅರ್ಥ. ಸಂಪತ್ತಿನ ಅಧಿದೇವತೆಯಾದ 'ಧನಲಕ್ಷ್ಮಿ' ಹಾಗೆ ಹೊಕ್ಕುಳ ಸೀಳಿಸಿಕೊಳ್ಳದಿದ್ದಲ್ಲಿ 'ದನ' ಆಗಿಬಿಡುತ್ತಾಳೆ, ಪಾಪ ಲಕುಮಿ! ಹಾಗೆಯೆ ಅವಧೂತರನ್ನು 'ಅವದೂತ'ರನ್ನಾಗಿಸಿದರೆ ಮಠಾಧೀಶರು ಸುಮ್ಮನಿರಲಾರರು. ಹಿಡಿ ಶಾಪ ಹಾಕುವುದು ಒತ್ತಟ್ಟಿಗಿರಲಿ; ಅವರು ಬಂಡೇಳುವುದಕ್ಕೂ ಹೇಸುವುದಿಲ್ಲ, ಈಗ.

'ಆರಂಬ ಮಾಡುವೆ ಗುರು ಸೇವೆಗೆಂದು....' ಎಂದು ಆರಂಭವಾಗುವ ಬಸವಣ್ಣನ ಜನಪ್ರಿಯ ವಚನವೊಂದಿದೆ. ಇಲ್ಲಿನ ಮೊದಲ ಪದ 'ಆರಂಬ'